ಸೂ. 11	**101. ಅಲ್ ಕಾರಿಅಃ**	ರು. 1

اٰياتها ١١ سُورَةُ الْقَارِعَةِ مَكِّيَّةٌ رُكُوعُهَا ١

(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ	بِسْمِ اللّٰهِ الرَّحْمٰنِ الرَّحِيْمِ ۝
1. ಮಹಾ ದುರಂತ!	اَلْقَارِعَةُ ۝١
2. ಏನದು ಮಹಾ ದುರಂತ?	مَا الْقَارِعَةُ ۝٢
3. ಆ ಮಹಾ ದುರಂತವೇನೆಂದು ನಿಮಗೇನು ಗೊತ್ತು?	وَمَآ اَدْرٰىكَ مَا الْقَارِعَةُ ۝٣
4. ಅಂದು ಜನರು ಚದುರಿದ ಹಾತೆಗಳಂತಾಗುವರು-	يَوْمَ يَكُوْنُ النَّاسُ كَالْفَرَاشِ الْمَبْثُوْثِ ۝٤
5. ಮತ್ತು ಪರ್ವತಗಳು ಬಣ್ಣ ಬಣ್ಣದ ಹಿಂಜಿದ ಉಣ್ಣೆಯಂತಾಗಿ ಬಿಡುವುದು.	وَتَكُوْنُ الْجِبَالُ كَالْعِهْنِ الْمَنْفُوْشِ ۝٥
6. ತರುವಾಯ ಯಾರ ತೂಕದ ತಟ್ಟೆಗಳು ಭಾರವಾಗಿರುವುವೋ-[1]	فَاَمَّا مَنْ ثَقُلَتْ مَوَازِيْنُهٗ ۝٦
7. ಅವನು ಮನೋಹರವಾದ ಸುಖಭೋಗದಲ್ಲಿರುವನು.	فَهُوَ فِيْ عِيْشَةٍ رَّاضِيَةٍ ۝٧
8. ಮತ್ತು ಯಾರ ತೂಕದ ತಟ್ಟೆಗಳು ಹಗುರವಾಗಿರುವುವೋ-	وَاَمَّا مَنْ خَفَّتْ مَوَازِيْنُهٗ ۝٨
9. ಅವನ ನಿವಾಸವು ಆಳವಾದ ಹೊಂಡವಾಗಿರುವುದು.	فَاُمُّهٗ هَاوِيَةٌ ۝٩
10. ಅದೇನೆಂದು ನಿಮಗೇನು ಗೊತ್ತು?	وَمَآ اَدْرٰىكَ مَا هِيَهْ ۝١٠
11. ಧಗಧಗಿಸುವ ಅಗ್ನಿಯದು.	نَارٌ حَامِيَةٌ ۝١١ ع

---

1. ಅರ್ಥಾತ್- ಒಳಿತಿನ ತಟ್ಟೆ ಭಾರವಾಗಿರುವವರು.